ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು

**ಸ್ಪೇಷಲ್ ಕೇಸ್ :475/2021**

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಲೋಲಾಕ್ಷಿ | |
| ಗಂಡನ ಹೆಸರು | : | ಡಾ. ಶ್ರೀನಿವಾಸ | |
| ವಯಸ್ಸು | : | 43 ವರ್ಷ | |
| ವೃತ್ತಿ | : | ಪೊಲೀಸ್ ನಿರೀಕ್ಷಕರು , ಮೈಸೂರು ಜಿಲ್ಲಾ ಕಚೇರಿ ಮೈಸೂರು | ಪಿ.ಡಬ್ಲೂಃ 7 |
| ವಾಸಸ್ಥಳ | : | ಮೈಸೂರು | ಸಿ.ಡಬ್ಲೂಃ 18 |

**ಸಾಕ್ಷಿಯನ್ನು ದಿಃ 28.07.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ**

1. ಜೂನ್ 2020 ರಿಂದ ಪೆಬ್ರವರಿ 2021 ರವರೆಗೆ ಸಿಸಿ ಐ ಬಿ ಮೈಸೂರಿನಲ್ಲಿ ಪೊಲೀಸ್ ನಿರೀಕ್ಷಕರಾಗಿ ಕರ್ತವ್ಯ ನಿರ್ವಹಿಸಿದ್ದೇನೆ.

2. ದಿಃ 02.10.2020 ರಂದು ಬೆಳಿಗ್ಗೆ 11 ಗಂಟೆಗೆ ಠಾಣೆಯಲ್ಲಿದ್ದಾಗ ಫ್ರಾಸಾ 1 ರವರು ನೀಡಿದ ದೂರನ್ನು ಸ್ವೀಕರಿಸಿ ,ಪ್ರಥಮ ವರ್ತಮಾನ ವರದಿ 9/2020 ನ್ನು ದಾಖಲಿಸಿ ಘನ ನ್ಯಾಯಾಲಯಕ್ಕೆ ಹಾಗೂ ಮೇಲಾಧಿಕಾರಿಗೆ ನಿವೇದಿಸಿಕೊಂಡೆ. ಫ್ರಾಸಾ 1 ರವರು ನೀಡಿದ ದೂರು ನಿಪಿ. 1 ಅದರಲ್ಲಿರುವ ನನ್ನ ಸಹಿ ನಿಪಿ. 1(ಬಿ) ಎಂದು ಗುರುತಿಸಲಾಯಿತು. ಪ್ರಥಮ ವರ್ತಮಾನ ವರದಿಯನ್ನು ನಿಪಿ.-18 ಎಂದು, ಅದರಲ್ಲಿರುವ ನನ್ನ ಸಹಿಯನ್ನು ನಿಪಿ.- 18 (ಎ) ಎಂದು ಗುರುತಿಸಲಾಯಿತು. ಅದೇ ದಿನ ಚಾಸಾ- 17 ರವರಿಂದ NDPS ಕಲಂ 41 ರೀತಿ ಅನುಮತಿಯನ್ನು ಕೋರಿಕೊಂಡು ಪಡೆದುಕೊಂಡೆ. ಸದರಿ

ಕೋರಿಕೆ ಮತ್ತು ಅನುಮತಿ ಪತ್ರ ವನ್ನು ನಿಪಿ.–19 ಎಂದು, ಅವುಗಳಲ್ಲಿರುವ ನನ್ನ ಸಹಿಯನ್ನು ನಿಪಿ.– 19 (ಎ) ಎಂದು ಗುರುತಿಸಲಾಯಿತು. ನಿಪಿ. 19 ರಲ್ಲಿರುವ ಚಾಸಾ– 17 ರವರ ಸಹಿಯನ್ನು ನಿಪಿ. 19(ಬಿ) ಎಂದು ಗುರುತಿಸಲಾಯಿತು. ಅದೇ ದಿನ ಚಾಸಾ– 2 ಮತ್ತು 3 ರವರ ಠಾಣೆಗೆ ಬರಮಾಡಿಕೊಂಡು ವಿಷಯ ತಿಳಿಸಿ, ಸಾಕ್ಷಿಧಾರರಾಗಿ ಸಹಕರಿಸಬೇಕೆಂದು ಕೋರಿ ನಿಪಿ. 3 ರಂತೆ ನೋಟೀಸ್ ನೀಡಿರುತ್ತೇನೆ. ನಿಪಿ. 3 ರಲ್ಲಿರುವ ನನ್ನ ಸಹಿಯನ್ನು ನಿಪಿ. 3(ಸಿ) ಎಂದು ಗುರುತಿಸಲಾಯಿತು. ಮಹಜರ ಸಾಕ್ಷಿಧಾರರಾದ ಪ್ರಾಸಾ 1 ರಿಂದ 4 ಚಾಸಾ– 12 ರಿಂದ 15 ರವರೊಂದಿಗೆ 1 ನೇ ಆರೋಪಿತ ಗಾಂಜಾ ಮಾರಾಟ ಮಾಡುತ್ತಿದ್ದ ಸ್ಥಳಕ್ಕೆ ಇಲಾಖಾ ವಾಹನದಲ್ಲಿ ಹಾಗೂ ದ್ವಿಚಕ್ರ ವಾಹನಗಳಲ್ಲಿ ಮಧ್ಯಾಹ್ನ 12.00 ಗಂಟೆಗೆ ಹೋದೆವು. ಆಗ ಅಂಗಡಿಯಲ್ಲಿದ್ದ ಆಸಾಮಿಯು ನಮ್ಮನ್ನು ನೋಡಿ ಓಡಲು ಪ್ರಯತ್ನಿಸಿದ. ಆತನನ್ನು ಹಿಡಿದು, ಆತನ ಹೆಸರು ವಿಳಾಸ ಕೇಳಿದಾಗ ಅಬ್ದುಲ್ ರಹೀಮ ಎಂದು ಹೇಳಿ ಮತ್ತು ಆತನ ವಿಳಾಸ ತಿಳಿಸಿದ. ಆತನಿಗೆ ನಮ್ಮ ಪರಿಚಯ ಮಾಡಿಕೊಂಡು , ಬಂದ ಮಾಹಿತಿಯನ್ನು ಆತನಿಗೆ ತಿಳಿಸಿ ಆತನ ಅಂಗಶೋಧನೆ ಮಾಡಲು ಗೆಜೆಟೆಡ್ ಅಧಿಕಾರಿಯನ್ನು ಕರೆಸಬೇಕೋ , ನಾವೇ ಮಾಡಬಹುದೇ ಎಂದು ವಿಚಾರಿಸಲಾಗಿ, ನಾವೇ ಮಾಡಬಹುದು ಎಂದು ತಿಳಿಸಿದ. ಆತನ ಅಂಗಡಿಯನ್ನು ಪರಿಶೀಲಿಸಿಲಾಗಿ ಅಂಗಡಿಯಲ್ಲಿ ಒಂದು ಪಾರದರ್ಶಕ ಪ್ಲಾಸ್ಟಿಕ್ ಕವರ್ ನಲ್ಲಿ ಗಾಂಜಾ ಇರುವುದು ಕಂಡು ಬಂತು. ಸದರಿ ಪ್ಲಾಸ್ಟಿಕ್ ಕವರ್ ನಲ್ಲಿ ಎಲೆ , ಹೂವು , ಕಾಂಡಗಳಿಂದು ಕೂಡಿದ ಗಾಂಜಾ ಇದ್ದು, ಪ್ಲಾಸ್ಟಿಕ್ ಕವರ್ ಸಮೇತ ತೂಕ ಮಾಡಲಾಗಿ 1 ಕೆಜಿ 983 ಗ್ರಾಂ ಇತ್ತು. ಪ್ಲಾಸ್ಟಿಕ್ ಕವರ್ ನ್ನು ಪಂಚರ ಸಮಕ್ಷಮ ಬಿಳಿ ಬಟ್ಟೆ ಚೀಲದಲ್ಲಿ ಹಾಕಿ ಹೊಲೆದು ಎ ಎಂಬ ಅಕ್ಷರದಿಂದ ಸೀಲ್ ಮಾಡಿ ಅಮಾನತ್ತು ಪಡಿಸಿಕೊಳ್ಳಲಾಯಿತು. ನಂತರ ಚೀಲದ ಮೇಲೆ ಆರೋಪಿತನ ಮತ್ತು ನಮ್ಮ ಸಹಿಗಳನ್ನು ಮಾಡಲಾಯಿತು. ಆತನನ್ನು

ಈ ಬಗ್ಗೆ ವಿಚಾರಿಸಲಾಗಿ, 3 ನೇ ಆರೋಪಿತನಿಂದ ಖರೀದಿ ಮಾಡಿದ್ದು, 150–200 ರೂ. ಬೆಲೆಯ ಸಣ್ಣ ಸಣ್ಣ ಪೊಟ್ಟಣಗಳನ್ನು ಮಾಡಿ ಮಾರಾಟ ಮಾಡುತ್ತೀರುವುದಾಗಿ ತಿಳಿಸಿದ. ನಂತರ 1 ನೇ ಆರೋಪಿತನ ಅಂಗಶೋಧನೆ ಮಾಡಿದಾಗ ಆತನ ಬಲಭಾಗದ ಜೇಬಿನಲ್ಲಿ ರೂ. 2,200/–ಇತ್ತು. ಸಾಕ್ಷಿ ಪುನಃ ಹೇಳುತ್ತಾರೆ, ಆರೋಪಿತನೇ ರೂ. 2,200/– ನ್ನು ತನ್ನ ಪ್ಯಾಂಟಿನ ಜೇಬಿನಿಂದ ತೆಗೆದು ಹಾಜರುಪಡಿಸಿದ. ಅದರಲ್ಲಿ 500 ರೂ ಮುಖಬೆಲೆಯ 3 ನೋಟುಗಳು , 200 ರೂ ಮುಖಬೆಲೆಯ 2 ನೋಟುಗಳು ಮತ್ತು 100 ಮುಖಬೆಲೆಯ 3 ನೋಟುಗಳಿದ್ದು ವಿಚಾರಿಸಲಾಗಿ , ಈ ವಿವಸ ಗಾಂಜಾ ಮಾರಾಟದಿಂದ ಬಂದ ಹಣ ಎಂದು ತಿಳಿಸಿದ. ಸದರಿ ಹಣವನ್ನು ಸಣ್ಣ ಪ್ಲಾಸ್ಟಿಕ್ ಚೀಲದಲ್ಲಿ ಹಾಕಿ ಪಂಚರ ಸಮಕ್ಷಮ ಬಿಳಿ ಬಟ್ಟೆ ಚೀಲದಲ್ಲಿ ಹಾಕಿ ಎ ಎಂಬ ಅಕ್ಷರದಿಂದ ಅರಗಿನ ಸೀಲ್ ಮಾಡಿ ವಸ್ತು ಸಂಖ್ಯೆ 2 ಎಂದು ಮಾಡಿ , ಅಮಾನತ್ತು ಪಡಿಸಿ ಪಂಚರ ಆರೋಪಿತನ ಹಾಗೂ ನಮ್ಮ ಸಹಿ ಇರುವ ಚೀಟಿಯನ್ನು ಲಗತ್ತಿಸಲಾಯಿತು. ಗಾಂಜಾದ ಬಗ್ಗೆ ವಿಚಾರಿಸಲಾಗಿ 2 ಮತ್ತು 3 ನೇ ಆರೋಪಿತನಿಂದ ಖರೀದಿಸುತ್ತಿರುವುದಾಗಿ ಮತ್ತು 2 ನೇ ಆರೋಪಿತನು ತನ್ನ ವಾಸದ ಮನೆಯಲ್ಲಿ ಗಾಂಜಾವನ್ನು ಇಟ್ಟುಕೊಂಡಿರುವುದಾಗಿ ಹಾಗೂ ತನ್ನ ಜೊತೆ ಬಂದಲ್ಲಿ ಸದರಿ ಆಸಾಮಿಯ ಮನೆಯನ್ನು ಮತ್ತು ಆತ ಇಟ್ಟ ಗಾಂಜಾವನ್ನು ಇಟ್ಟಿರುವುದನ್ನು ತೋರಿಸುದಾಗಿ ಹೇಳಿದ. (1 ನೇ ಆರೋಪಿತನ ಪರ ವಕೀಲರು 1 ನೇ ಆರೋಪಿತನನ್ನು ಗುರುತಿಸುವಿಕೆಯ ಬಗ್ಗೆ ಆಕ್ಷೇಪ ಇರುವುದಿಲ್ಲ ಎಂದು ಹೇಳಿ, 317 ಸಿ ಆರ್ ಪಿ ಸಿ ಕೆಳಗಡೆ ಅರ್ಜಿಯನ್ನು ಸಲ್ಲಿಸಿರುತ್ತಾರೆ.) ಆರೋಪಿತನ ವಶದಲದ್ದಿದ್ದ ಗಾಂಜಾ ಮತ್ತು ಹಣವನ್ನು ಮೇಲೆ ಹೇಳಿದಂತೆ ಮಹಜರ ಕ್ರಮವನ್ನು ಮಧ್ಯಾಹ್ನ 12.15 ರಿಂದ 1.45 ರವರೆಗೆ ಜರುಗಿಸಿ ಅಮಾನತ್ತು ಪಡಿಸಲಾಯಿತು. 1 ನೇ ಆರೋಪಿತ 2 ಮತ್ತು 3 ನೇ ಆರೋಪಿತರನ್ನು ಮತ್ತು ಮನೆಯನ್ನು

ತೋರಿಸುವುದಾಗಿ ಹೇಳಿದ್ದರಿಂದ ಸದರಿ ಮಹಜರಗೆ ಸಹಕರಿಸುವಂತೆ ಕೋರಿದೆ. ನಂತರ ನಮ್ಮ ಹಾಗೂ ಮಹಜರ ಸಾಕ್ಷಿಗಳ ಅಂಗಶೋಧನೆ ಮಾಡಿಕೊಂಡು , ನಮ್ಮ ವಶದಲ್ಲಿ 1 ನೇ ಆರೋಪಿತನಿಂದ ಅಮಾನತ್ತು ಪಡಿಸಿದ ವಸ್ತುವನ್ನು ಹೊರತುಪಡಿಸಿ ಬೇರೆ ವಸ್ತು ಇಲ್ಲ ಎಂದು ಖಚಿತ ಪಡಿಸಿಕೊಂಡೆವು. ನಂತರ ಮಧ್ಯಾಹ್ನ 1.50 ರ ಸುಮಾರಿಗೆ 1 ನೇ ಆರೋಪಿತ ತೋರಿಸಿದಂತೆ ಮೈಸೂರಿನ , ರಾಜೀವನಗರದ 1 ನೇ ಹಂತ, 11 ನೇ ವಾರ್ಡನಲ್ಲಿರುವ ಮನೆ ಸಂಖ್ಯೆ 2166 ರ 1 ನೇ ಮಹಡಿಗೆ ಮಧ್ಯಾಹ್ನ 2 ಗಂಟೆಗೆ ಹೋದೆವು. ಮನೆಯ ದಕ್ಷಿಣ ದಿಕ್ಕಿನಲ್ಲಿದ್ದ ಮುಖ್ಯದ್ವಾರದಿಂದ ಪ್ರವೇಶ ಮಾಡಲಾಗಿ , ಹಾಲ್ ನಲ್ಲಿ ಇಬ್ಬರು ವ್ಯಕ್ತಿಗಳು ಇದ್ದು, 1 ನೇ ಆರೋಪಿತ ಅವರಿಬ್ಬರನ್ನು ತೋರಿಸಿ , ಅಲೀಂ ಪಾಷಾ ಮತ್ತು ಸೈಯದ್ ಖಾದರ್ ಇರ್ಫಾನ್ ಎಂದು ತಿಳಿಸಿ, ಅವರಿಂದಲೇ ಗಾಂಜಾವನ್ನು ಖರೀದಿಸುತ್ತಿರುವುದಾಗಿ ತಿಳಿಸಿದ. ಸದರಿ ಆಸಾಮಿಗಳನ್ನು ಮಧ್ಯಾಹ್ನ 2.05 ಗಂಟೆಗೆ ವಶಕ್ಕೆ ಪಡೆದು ವಿಚಾರಿಸಲಾಗಿ , ಹೆಸರು ವಿಳಾಸ ತಿಳಿಸಿದರು. ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ. 3 ನೇ ಆರೋಪಿತ ನ್ಯಾಯಾಲಯದಲ್ಲಿ ಇದ್ದಾರೆ. ಸದರಿ ಆರೋಪಿತನಿಗೆ ಅವರ ಅಂಗಶೋಧನೆ ಮಾಡಲು ಗೆಜೆಟೆಡ್ ಅಧಿಕಾರಿಯನ್ನು ಕರೆಸಬೇಕೋ , ನಾವೇ ಮಾಡಬಹುದೇ ಎಂದು ವಿಚಾರಿಸಲಾಗಿ, ನಾವೇ ಮಾಡಬಹುದು ಎಂದು ತಿಳಿಸಿದರು. ಈ ಬಗ್ಗೆ 2 ಮತ್ತು 3 ನೇ ಆರೋಪಿತರಿಗೆ ನೋಟೀಸ್ ನ್ನು ನೀಡಿದ್ದೇನೆ. ನಾನು 3 ಜನ ಆರೋಪಿತರಿಗೆ ನೀಡಿದ ನೋಟೀಸ್ ಗಳನ್ನು ನಿಪಿ.-20, 21, 22 ಎಂದು, ಅವುಗಳಲ್ಲಿರುವ ನನ್ನ ಸಹಿಯನ್ನು ನಿಪಿ.- 20(ಎ), 21(ಎ), 22(ಎ) ಎಂದು ಗುರುತಿಸಲಾಯಿತು. ಸದರಿ ಮನೆಯನ್ನು ಪರಿಶೀಲಿಸಲಾಗಿ , ಮನೆಯ ಹಾಲ್ ನ ಪಶ್ಚಿಮ ದಿಕ್ಕಿನಲ್ಲಿ 2 ಬೆಡ್ ರೂಮ್ ಗಳಿದ್ದು, ಹಾಲ್ ನ ಉತ್ತರದ ಕಡೆ ಅಡುಗೆ ಕೊಣೆ ಇತ್ತು. ಸದರಿ ಮನೆಯ 1 ನೇ ಕೊಟಡಿಯ ದಕ್ಷಿಣದ ಗೋಡೆಯ ಸಜ್ಜಾದ ಮೇಲೆ

ಜುವಾರಿ ಸಿಮೆಂಟ್ ನ ಬಿಳಿ ಚೀಲ ಇದ್ದು, ಅದನ್ನು ತೆಗೆದು ಪರಿಶೀಲಿಸಲಾಗಿ , ಅದರಲ್ಲಿ ಖಾಕಿ ಬಣ್ಣದ ಪ್ಯಾಕಿಂಗ್ ಟೇಪ ಸುತ್ತಿದ ಒಂದು ಬಂಡಲ್ ಮತ್ತು ಒಂದು ಪಾರದರ್ಶಕ ಕವರ್ ನಲ್ಲಿ ಗಾಂಜಾ ಇರುವುದು ಕಂಡು ಬಂತು. ಪಾರದರ್ಶಕ ಕವರ್ ನಲ್ಲಿ ಎಲೆ, ಹೂವು, ಕಾಂಡ ಗಳಿಂದ ಕೂಡಿರುವ ಗಾಂಜಾ ಇತ್ತು. ಅದನ್ನು ಪ್ಲಾಸ್ಟಿಕ್ ಕವರ್ ಸಮೇತ ತೂಕ ಮಾಡಲಾಗಿ 3 ಕೆಜಿ 105 ಗ್ರಾಂ ತೂಕ ಇತ್ತು. ಸದರಿ ಗಾಂಜಾವನ್ನು ಪ್ಲಾಸ್ಟಿಕ್ ಕವರ್ ಸಮೇತ ಪಂಚರ ಸಮಕ್ಷಮ ಬಿಳಿ ಬಟ್ಟೆ ಚೀಲದಲ್ಲಿ ಹಾಕಿ ಎ ಎಂಬ ಅಕ್ಷರದಿಂದ ಅರಗಿನ ಸೀಲ್ ಮಾಡಿ ಅಮಾನತ್ತು ಪಡಿಸಿಕೊಳ್ಳಲಾಯಿತು. ಅದಕ್ಕೆ ವಸ್ತು ಸಂಖ್ಯೆ 3 ಎಂದು ನಮೂದು ಮಾಡಿ , ಆರೋಪಿತರ ಮತ್ತು ಪಂಚರ ಸಹಿ ಇರುವ ಚೀಟಿಯನ್ನು ಅಂಟಿಸಲಾಯಿತು.

3. ನಂತರ ಖಾಕಿ ಬಣ್ಣದ ಪ್ಯಾಕಿಂಗ್ ಟೇಪ್ ನಿಂದ ಪ್ಯಾಕ್ ಮಾಡಿದ ಬಂಡ್ ನ್ನು ಪರಿಶೀಲಿಸಲಾಗಿ ಅದರಲ್ಲಿ ಎಲೆ, ಹೂವು, ಕಾಂಡ ಗಳಿಂದ ಕೂಡಿರುವ ಗಾಂಜಾ ಇದ್ದು, ಅದನ್ನು ನ್ಯೂಸ್ ಪೇಪರ್ ಮತ್ತು ಪ್ಲಾಸ್ಟಿಕ್ ಕವರ್ ನಿಂದ ಪ್ಯಾಕಿಂಗ್ ಮಾಡಿದ್ದು, ಒಟ್ಟಿಗೆ ತೂಕ ಮಾಡಲಾಗಿ 5 ಕೆಜಿ 044 ಗ್ರಾಂ ಇತ್ತು. ಸದರಿ ಗಾಂಜಾವನ್ನು ಖಾಕಿ ಬಣ್ಣದ ಪ್ಯಾಕಿಂಗ್ ಟೇಪ್, ನ್ಯೂಸ್ ಪೇಪರ್ ಮತ್ತು ಪ್ಲಾಸ್ಟಿಕ್ ಕವರ್ ಸಮೇತ ಪಂಚರ ಸಮಕ್ಷಮ ಬಿಳಿ ಬಟ್ಟೆ ಚೀಲದಲ್ಲಿ ಹಾಕಿ ಎ ಎಂಬ ಅಕ್ಷರದಿಂದ ಅರಗಿನ ಸೀಲ್ ಮಾಡಿ ಅಮಾನತ್ತು ಪಡಿಸಿಕೊಳ್ಳಲಾಯಿತು. ಅದಕ್ಕೆ ವಸ್ತು ಸಂಖ್ಯೆ 4 ಎಂದು ನಮೂದು ಮಾಡಿ , ಆರೋಪಿತರ ಮತ್ತು ಪಂಚರ ಸಹಿ ಇರುವ ಚೀಟಿಯನ್ನು ಅಂಟಿಸಲಾಯಿತು.

4. ನಂತರ ಮೇಲೆ ಹೇಳಿದ ಜುವಾರಿ ಸಿಮೆಂಟ್ ಕಂಪನಿಯ ಚೀಲವನ್ನು ಪಂಚರ ಸಮಕ್ಷಮ ಬಿಳಿ ಬಟ್ಟೆ ಚೀಲದಲ್ಲಿ ಹಾಕಿ ಎ ಎಂಬ ಅಕ್ಷರದಿಂದ ಅರಗಿನ ಸೀಲ್ ಮಾಡಿ ಅಮಾನತ್ತು ಪಡಿಸಿಕೊಳ್ಳಲಾಯಿತು. ಅದಕ್ಕೆ ವಸ್ತು ಸಂಖ್ಯೆ 5 ಎಂದು ನಮೂದು ಮಾಡಿ ,

ಆರೋಪಿತರ ಮತ್ತು ಪಂಚರ ಸಹಿ ಇರುವ ಚೀಟಿಯನ್ನು ಅಂಟಿಸಲಾಯಿತು. ಅದನ್ನು ಮುದ್ದೆ ಮಾಲು 1 ಎಂದು ಈಗಾಗಲೇ ಗುರುತಿಗೆ ಒಳಪಟ್ಟಿದ್ದು, ಅದರಲ್ಲಿರುವ ನನ್ನ ಸಹಿಯನ್ನು ಮುದ್ದೆ ಮಾಲು 1(ಎ) ಎಂದು ಗುರುತಿಸಲಾಯಿತು. 2 ಮತ್ತು 3 ನೇ ಆರೋಪಿತರನ್ನು ಈ ಗಾಂಜಾದ ಬಗ್ಗೆ ವಿಚಾರಿಸಲಾಗಿ , ಒರಿಸ್ಸಾದ ಗೋವಿಂದ ಹಾಗೂ ಕುಶಾಲನಗರದ ಜೈನುಲ್ಲಾ ಬಿದಿನ್ ರವರಿಂದ ಖರೀದಿಸಿದ್ದಾಗಿ ತಿಳಿಸಿದರು. ಸದರಿ ಮಹಜರ ಕ್ರಮವನ್ನು ಮಧ್ಯಾಹ್ನ 2.15 ರಿಂದ 4 ಗಂಟೆಯವರೆಗೆ ಚಾಸಾ– 15 ರವರಿಂದ ಲ್ಯಾಪಟಾಪ್ ನಲ್ಲಿ ಟೈಪ ಮಾಡಿಸಿ , ಪೆನ್ ಡ್ರೈವ್ ನಲ್ಲಿ ಹಾಕಿ , ಉದಯಗಿರಿ ಪೊಲೀಸ್ ಠಾಣೆಗೆ ಕಳುಹಿಸಿ , ಪ್ರಿಂಟ್ ಹಾಕಿಸಿ ತರೆಸಿಕೊಂಡು, ಅದಕ್ಕೆ ಆರೋಪಿತರ , ಪಂಚರ ಸಹಿ ಪಡೆದು ನಾನು ಸಹಿ ಮಾಡಿದ್ದೇನೆ. ನಿಪಿ. 2 ರಲ್ಲಿರುವ ನನ್ನ ಸಹಿಯನ್ನು ನಿಪಿ.2 (ಇ) ಎಂದು ಗುರುತಿಸಲಾಯಿತು. ಆರೋಪಿತರ ಮತ್ತು ಪಂಚರ ಸಹಿಗಳನ್ನು ಗುರುತಿಸಿದ್ದೇನೆ. ಆರೋಪಿತರ ಸಹಿಗಳನ್ನು ನಿಪಿ. 2(ಎಫ , ಜಿ ಮತ್ತು ಹೆಚ್ ) ಎಂದು ಗುರುತಿಸಲಾಯಿತು.

5. ನಂತರ ಅಮಾನತ್ತು ಪಡಿಸಿದ ವಸ್ತು ಸಂಖ್ಯೆ 1 ರಿಂದ 5 ಮತ್ತು ಆರೋಪಿತರೊಂದಿಗೆ ಠಾಣೆಗೆ ಹಿಂದಿರುಗಿ ಅಮಾನತ್ತು ಪಡಿಸಿದ ವಸ್ತುಗಳನ್ನು ಮಾಲುಪಟ್ಟಿ ಸಂಖ್ಯೆ 17/2020 ರಲ್ಲಿ ನಮೂದು ಮಾಡಿ ಘನ ನ್ಯಾಯಾಲಯಕ್ಕೆ ನಿವೇದಿಸಿಕೊಂಡೆ. ನಂತರ ಆರೋಪಿತರ ಸ್ವ ಇಚ್ಛಾ ಹೇಳಿಕೆಯನ್ನು ಪಡೆದುಕೊಂಡೆ. ಆರೋಪಿತರ ಸ್ವ ಇಚ್ಛಾ ಹೇಳಿಕೆಗಳನ್ನು ನಿಪಿ.– 23,24 ಮತ್ತು 25 ಎಂದು, ಅದರಲ್ಲಿರುವ ನನ್ನ ಸಹಿಯನ್ನು ನಿಪಿ.– 23(ಎ),24 (ಎ)ಮತ್ತು 25(ಎ) ಎಂದು ಗುರುತಿಸಲಾಯಿತು. ಆರೋಪಿತರ ಸಹಿಗಳನ್ನು 23(ಬಿ),24 (ಬಿ)ಮತ್ತು 25(ಬಿ) ಎಂದು ಗುರುತಿಸಲಾಯಿತು. ಅದೇ ದಿನ ಆರೋಪಿತರನ್ನು ರಿಮಾಂಡ್ ಅರ್ಜಿಯೊಂದಿಗೆ ನ್ಯಾಯಾಲಯಕ್ಕೆ ಹಾಜರುಪಡಿಸಿದೆ. 2 ಮತ್ತು

3 ನೇ ಆರೋಪಿತರಲ್ಲಿ ಓರಿಸ್ಸಾದ ಗೋವಿಂದ ಹಾಗೂ ಕುಶಾಲನಗರದ ಜೈನುಲ್ಲಾ ಬಿದಿನ್ ರವರ ಬಗ್ಗೆ ವಿಚಾರಿಸಲಾಗಿ ಅವರ ವಿಳಾಸವನ್ನು ನೀಡಿರುವುದಿಲ್ಲ.

6. ಅಮಾನತ್ತು ಪಡಿಸಿದ ಗಾಂಜಾದ ಇನ್ವೆಂಟರೀ ಮಾಡಲು ಘನ ನ್ಯಾಯಾಲಯಕ್ಕೆ ದಿಃ 03.10.2020 ರಂದು ಕೋರಿಕೊಂಡೆ. ಅದೇ ದಿನ ಪ್ರಾಸಾ – 2 , 3 ರವರ ಹೇಳಿಕೆಯನ್ನು ಪಡೆದುಕೊಂಡೆ. ಅದೇ ದಿನ ಪ್ರಾಸಾ 1 ಮತ್ತು ಚಾಸಾ– 11 ರಿಂದ 17 ರವರ ಹೇಳಿಕೆಯನ್ನು ಪಡೆದುಕೊಂಡೆ. ಅದೇ ದಿನ ಮುಂದುವರೆದ ತನಿಖೆಯನ್ನು ಚಾಸಾ– 19 ರವರಿಗೆ ಹಸ್ತಾಂತರಿಸಿದೆ.

**ಪಾಟೀ ಸವಾಲುಃ ಆರೋಪಿತರ ಪರ ವಕೀಲರು ಸಮಯಾವಕಾಶ ಕೋರಿದ್ದರಿಂದ , ದಂಡ ವಿಧಿಸಿ ಮುಂದೂಡಲಾಯಪಿತು.**

ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ ಹೇ ಕೇ ಸ ಇ ಎ ಒ.,

(ಉಷಾ ರಾಣಿ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮೈಸೂರು.